# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ. ಬೆಂಗಳೂರು.

ದಿನಾಂಕ:28-01-2021

ಸಂಖ್ಯೆ: ಸ.ಅ/ವಾ-46/ಪಿ.ಆರ್/ 08 /2020-21

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 25-01-2021 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಿ |
|---|---|---|---|
| 1. | ಶ್ರೀ.ಎಸ್.ಜಿ.ರವೀಂದ್ರ. ಭಾ.ಸ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | ಹಾಜರಿ |
| 2. | ಶ್ರೀ.ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 | ಹಾಜರಿ |
| 3. | ಶ್ರೀ.ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿಗಳು ವಾಡ್ ನಂ: 46 | ಗೈರು ಹಾಜರಿ |
| 4. | ಶ್ರೀ.ಹೆಚ್.ಮೂರ್ತಿ | ಕಂದಾಯ ವಸೂಲಿದಾರರು ವಾರ್ಡ್ ನಂ: 46 | ಹಾಜರಿ |
| 5. | ಶ್ರೀ.ಮಂಜುನಾಥ್.ಕೆ.ಎನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) | ಹಾಜರಿ |
| 6. | ಶ್ರೀ.ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ:46 | ಹಾಜರಿ |
| 7. | ಶ್ರೀ.ರಾಜಣ್ಣ | ಕಂದಾಯ ಅಧಿಕಾರಿ ಜೆ.ಸಿ ನಗರ | ಗೈರು ಹಾಜರಿ |
| 8. | ಶ್ರೀ.ಸುವರ್ಣದೇವಿ | ವರ್ಕ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 9. | ಶ್ರೀ.ಮೂರ್ತಿ | ವರ್ಕ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿ |
| 10. | ಶ್ರೀ.ಕೇತನ್ | ಅಸೆಸರ್ | ಹಾಜರಿ |
| 11. | ಶ್ರೀ.ರವೀಂದ್ರ | ಅರಣ್ಯಾಧಿಕಾರಿಗಳು | ಗೈರು ಹಾಜರಿ |
| 12. | ಶ್ರೀ ಮನೋಹರ್ | ಬೆಸ್ಕಾಂ ಇಲಾಖೆ | ಹಾಜರಿ |
| 13. | ಶ್ರೀ.ಎನ್.ಶಿವಪ್ಪ | ಘನ ತ್ಯಾಜ್ಯ ಸೂಪ್ರವೈಸರ್ | ಗೈರು ಹಾಜರಿ |
| 14. | ಶ್ರೀ. ಚೂಡಾಮಣಿ | ಪೊಲೀಸ್ ಅಧಿಕಾರಿ ASI | ಹಾಜರಿ |
| 15. | ಶ್ರೀ. ನಾರಾಯಣಪ್ಪ | ಸಂಚಾರಿ ಪೊಲೀಸ್ ಅಧಿಕಾರಿ | ಹಾಜರಿ |
| 16. | ಶ್ರೀಲಕ್ಷ್ಮೀಕಾಂತ್ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃಧ್ಧಿ ಸಂಘ | ಹಾಜರಿ |
| 17. | ಶ್ರೀ.ಹರೀಶ್‌ರೆಡ್ಡಿ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃಧ್ಧಿ ಸಂಘ | ಹಾಜರಿ |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಯುವರಾಜ್.ಬಿ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಜಿ.ರವೀಂದ್ರ, ಭಾ.ಸ.ಸೇ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು [illegible] ಕೋವಿಡ್-19 ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಇನ್ನಿತರೇ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ಹಿಂದಿನ ಸಭೆಯಲ್ಲಿ ವಾರ್ಡ್‌ನ ರಸ್ತೆ ಬದಿಯಲ್ಲಿ ಅಂತರ್ಜಾಲ ಸಂಪರ್ಕದ ಕೇಬಲ್ ವೈರ್‌ಗಳು ಜೋತಾಡುತ್ತಿರುವ ಬಗ್ಗೆ ದೂರು ನೀಡಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೆ ಅವುಗಳನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ತಿಳಿಸಲಾಯಿತು.
- ಬಿ.ಡಿ.ಎ ಕಾಂಪ್ಲೇಕ್ಸ್ ಒಳಗಡೆ ಕಾನೂನುಬಾಹಿರ ಕೆಲಸ ನಡೆಯುತ್ತಿದ್ದು, ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಇದರ ಬಗ್ಗೆ ದೂರು ನೀಡಿದ್ದು, ಅವರು ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.
- ತರಳುಬಾಳು ರಸ್ತೆ, 9ನೇ ಅಡ್ಡರಸ್ತೆ ಮತ್ತು ವಾರ್ಡ್‌ನ ಇನ್ನಿತರೆ ರಸ್ತೆಗಳಲ್ಲಿ ವೀಲೀಂಗ್ ಹೆಚ್ಚಾಗಿದ್ದು, ಅದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಯಿತು.
- 5ನೇ ಎ ಮುಖ್ಯರಸ್ತೆಯ ಮನೆ ನಂ. 608, 609 ಮನೆಯ ಮುಂದೆ ಮರದ ಕೊಂಬೆಗಳು ಚಾಚಿಕೊಂಡಿದ್ದು, ಅದನ್ನು ಕತ್ತರಿಸಲು ಕೋರಿದರು.
- ಆರ್.ಟಿ ನಗರ 2ನೇ ಬ್ಲಾಕ್‌ನಲ್ಲಿ ಬೀದಿ ದೀಪಗಳ ಕೊರತೆಯಿರುವ ಬೀದಿಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕೋರಿದರು. ಮತ್ತು ಕೆಲವೊಂದು ಕಂಬಗಳಲ್ಲಿ ಡಿ.ಪಿ ಸ್ವಿಚ್ ಇರುವುದಿಲ್ಲ ಅಂತಹ ಕಂಬಗಳಿಗೆ ಸ್ವಿಚ್‌ಗಳನ್ನು ಅಳವಡಿಸಲು ಕೋರಿದರು.
- ಚುಂಚಪ್ಪ ಬ್ಲಾಕ್‌ನಲ್ಲಿ ಕೆಲವೊಂದು ಮನೆಗಳಲ್ಲಿ ಕಾವೇರಿ ನೀರನ್ನು ಯಥೇಚ್ಛವಾಗಿ ಪೋಲು ಮಾಡುತ್ತಿದ್ದು, ಅಂತಹ ಮನೆಗಳಿಗೆ ದಂಡ ವಿಧಿಸಲು ಅಥವಾ ಸೂಕ್ತ ಕ್ರಮ ಜರುಗಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ದೇವೆಗೌಡ ಮುಖ್ಯರಸ್ತೆಯಲ್ಲಿ ಕೆಟ್ಟುಹೋದ ಮತ್ತು ಹಳೆಯ ಗಾಡಿಗಳನ್ನು ಫುಟ್‌ಪಾತ್ ಪಕ್ಕದಲ್ಲಿ ನಿಲ್ಲಿಸಿರುತ್ತಾರೆ ಇಂತಹ ವಾಹನಗಳಿಗೆ ದಂಡ ವಿಧಿಸುವುದು ಮತ್ತು ಟೋ ಮಾಡುವುದು ಅಥವಾ ಸೂಕ್ತ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೊಲೀಸರಿಗೆ ಸೂಚಿಸಲಾಯಿತು.
- ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ನಾಯಿಗಳ ಹಾವಳಿ ಬಗ್ಗೆ ದೂರನ್ನು ನೀಡಿರುತ್ತಾರೆ ಇದಕ್ಕೆ ಸಂಬಂಧಪಟ್ಟಂತೆ ಪಶುಸಂಗೋಪನಾ ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಮುಂದಿನ ಸಭೆಯಲ್ಲಿ ಭಾಗವಹಿಸಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.
- ಬೃಹತ್ ನೀರುಗಾಲುವೆ ಮೇಲಿರುವ ಫೆನ್ಸಿಂಗ್‌ಗಳ ವೈರ್‌ಗಳು ತುಂಡಾಗಿದ್ದು, ಅವುಗಳನ್ನು ವೆಲ್ಡಿಂಗ್ ಮಾಡುವುದು ಅಥವಾ ಸೂಕ್ತ ಕ್ರಮಗಳನ್ನು ವಹಿಸುವಂತೆ ಕೋರಲಾಯಿತು.
- ಜನವರಿ 25 ಮತದಾರರ ದಿನಾಚರಣೆ ಆದ್ದರಿಂದ ಸಭೆಯಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ನೋಡಲ್ ಆಫೀಸರ್ ಆದ ಶ್ರಿ.ಎಸ್.ಜಿ. ರವೀಂದ್ರ ರವರು ಮತದಾರರ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಭೋಧಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 46, ಜೆ.ಸಿ.ನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 46, ಜೆ.ಸಿ ನಗರ

<u>ಪ್ರತಿಯನ್ನು:-</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.